**2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.**

ಸಿ.ಸಿ. ನಂ.2692/2013

ಸಿಡಬ್ಲ್ಯೂ8 ಪಿಡಬ್ಲ್ಯೂ5

ಸಾಕ್ಷಿಯ ಹೆಸರು - ರಮೇಶ ಬೀಮಪ್ಪ ಅಗಡಿ

ವಯಸ್ಸು - 42 ವರ್ಷ

ಉದ್ಯೋಗ - ಅಬಕಾರಿ ನಿರೀಕ್ಷಕರು, ಮುಂಡರಗಿ

ವಾಸ - ಮುಂಡರಗಿ

ದಿನಾಂಕಃ 24-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ**

ನಾನು 2012 ರಿಂದ ಅಗಸ್ಟ 2016 ರವರೆಗೆ ಗೋಕಾಕ ವಲಯದಲ್ಲಿ ಅಬಕಾರಿ ಉಪನೀರಿಕ್ಷಕರು ಅಂತಾ ಗೋಕಾಕ ವಲಯದಲ್ಲಿ ಕಾರ್ಯನಿರ್ವಹಿಸಿರುತ್ತೇನೆ.

ದಿಃ 30-01-2013 ರಂದು ಚಾಸಾ 3 ರವರಿಂದ ಈ ಪ್ರಕರಣದ ಕಡತವನ್ನು ಸ್ವೀಕರಿಸಿಕೊಂಡು ರಾಸಾಯನಿಕ ಪ್ರಯೋಗಾಲಯಕ್ಕೆ ರಿಯಲ್ 7 ಎಕ್ಸ್ಟ್ರಾ ಸ್ಮೂತ್ ವಿಸ್ಕಿಯ 90 ಎಮ್ ಎಲ್ 2 ಬಾಟಲಿಗಳನ್ನು ಕಳುಹಿಸಿರುತ್ತೇನೆ ಹಾಗೂ ಎಪ ಎಸ್ ಎಲ್ ವರದಿಯನ್ನು ನಾನೇ ಸ್ವಿಕರಿಸಿಕೊಂಡಿದ್ದೇನೆ. ನಂತರ ದಾಳಿಯಲ್ಲಿ ಬಾಗವಹಿಸಿದಂತಹ ಚಾಸಾ 4 ಹಾಗೂ 5 ರವರ ಹೇಳಿಕೆ ಪಡೆದೆನು. ರಾಸಾಯನಿಕ ಪ್ರಯೋಗಾಲಯಕ್ಕೆ ಸ್ಯಾಂಪಲ್ ಸಾರಾಯಿ ಕೊಟ್ಟು ಬಂದ ಚಾಸಾ 6 ರವರ ಹೇಳಿಕೆ ಪಡೆದೆನು. ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಆರೋಪಿತರ ವಿರುದ್ದ ದೋಷಾರೊಪಣಾ ಪಟ್ಟಿ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ದಿಃ 12.06.2013 ರ ರಾಸಾಯನಿಕ ಪರಿಕ್ಷೆಗೆ ಕಳುಹಿಸಿರುವ ಪತ್ರ ತೋರಿಸಲಾಗಿ, ಅದರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ರಾಸಾಯನಿಕ ಪರೀಕ್ಷೆಯ ವರದಿ ತೋರಿಸಲಾಗಿ, ಅದರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-3, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ರಿಯಲ್ 7 ಎಕ್ಸ್ಟ್ರಾ ಸ್ಮೂತ್ ವಿಸ್ಕಿಯ 90 ಎಮ್ ಎಲ್ ನ ಖಾಲಿ ಇರುವ 2 ಬಾಟಲಿಗಳನ್ನು ತೋರಿಸಲಾಗಿ, ಅವುಗಳನ್ನು ಒಟ್ಟಾಗಿ ಮುಮಾ 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ದಿಃ 30-01-2013 ರಂದು ಚಾಸಾ 3 ರವರಿಂದ ಈ ಪ್ರಕರಣದ ಕಡತವನ್ನು ಸ್ವೀಕರಿಸಿಕೊಂಡು ರಾಸಾಯನಿಕ ಪ್ರಯೋಗಾಲಯಕ್ಕೆ ರಿಯಲ್ 7 ಎಕ್ಸ್ಟ್ರಾ ಸ್ಮೂತ್ ವಿಸ್ಕಿಯ 90 ಎಮ್ ಎಲ್ 2 ಬಾಟಲಿಗಳನ್ನು ಕಳುಹಿಸಿರುತ್ತೇನೆ ಹಾಗೂ ಎಪ ಎಸ್ ಎಲ್ ವರದಿಯನ್ನು ನಾನೇ ಸ್ವಿಕರಿಸಿಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ದಾಳಿಯಲ್ಲಿ ಬಾಗವಹಿಸಿದಂತಹ ಚಾಸಾ 4 ಹಾಗೂ 5 ರವರ ಹೇಳಿಕೆ ಪಡೆದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಸಾಯನಿಕ ಪ್ರಯೋಗಾಲಯಕ್ಕೆ ಸ್ಯಾಂಪಲ್ ಸಾರಾಯಿ ಕೊಟ್ಟು ಬಂದ ಚಾಸಾ 6 ರವರ ಹೇಳಿಕೆ ಪಡೆದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಆರೋಪಿತರ ವಿರುದ್ದ ದೋಷಾರೊಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಗೂ ಹಾಗೂ ಈ ಪ್ರಕರಣಕ್ಕೂ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.